152

# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ: 19/10/2016

**ಪ್ರಕರಣ ಸಂಖ್ಯೆ: ಆರ್.ಎ.(ಸಿಎಲ್‌ಡಬ್ಲ್ಯೂ) 109/2001-02**

ಉಪಸ್ಥಿತರು: ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

ಮೇಲ್ಮನವಿದಾರರು — ವಿರುದ್ಧ — ಎದುರುದಾರರು

**ಮೇಲ್ಮನವಿದಾರರು**

1. ಚಿನ್ನಪ್ಪ ಬಿನ್ ಪೆದ್ದಗುರಮ್ಮ.
2. ಶ್ರೀರಾಮಪ್ಪ ಬಿನ್ ಪೆದ್ದಗುರಮ್ಮ.
3. ಕೃಷ್ಣಪ್ಪ ಬಿನ್ ಪೆದ್ದಗುರಮ್ಮ.
4. ನಾರಾಯಣಸ್ವಾಮಿ ಬಿನ್ ದೊಡ್ಡಮುನಿಸ್ವಾಮಿ.
5. ಲಕ್ಷ್ಮಯ್ಯ ಬಿನ್ ದೊಡ್ಡಮುನಿಸ್ವಾಮಿ.
6. ಬೆಳ್ಳಮ್ಮ ಕೋಂ ಮುನಿವೆಂಕಟಪ್ಪ.
7. ಅಶ್ವತ್ಥಪ್ಪ ಬಿನ್ ನಾರೆಪ್ಪ.
8. ವೆಂಕಟೇಶಪ್ಪ ಬಿನ್ ಮ್ಯಾಕಲಪ್ಪ.
9. ರಾಮಕೃಷ್ಣಪ್ಪ ಬಿನ್ ಮ್ಯಾಕಲಪ್ಪ.
   ಎಲ್ಲರೂ ಅರಮಾಕಲಹಳ್ಳಿ ವಾಸಸ್ಥರು,
   ಕಸಬಾ ಹೋ॥ ಶ್ರೀನಿವಾಸಪುರ ತಾ॥
10. *ಲಕ್ಷ್ಮಮ್ಮ ಕೋಂ ವೆಂಕಟೇಶಪ್ಪ, ಶೆಟ್ಟಿಹಳ್ಳಿ ಫವತಿ ಇವರ ವಾರಸುದಾರರು*
    10ಅ) ಗೋವಿಂದಶೆಟ್ಟಿ ಬಿನ್ ಮುನಿಶಾಮಿ, ಶೆಟ್ಟಿಹಳ್ಳಿ
11. ಮುನಿಯಮ್ಮ ಕೋಂ ದೊಡ್ಡಮುನಿಸ್ವಾಮಿ,
12. ವೆಂಕಟೇಶಪ್ಪ ಬಿನ್ ಮುನಿವೆಂಕಟಪ್ಪ,
13. ನಂಜಪ್ಪ ಬಿನ್ ಚಿಕ್ಕವೆಂಕಟಪ್ಪ,
    -ಕ್ರಸಂ 11,12 ಮತ್ತು 13 ವಾಸ
    ಶೆಟ್ಟಿಹಳ್ಳಿ ಗ್ರಾಮ, ಕಸಬಾ ಹೋಬಳಿ,
    ಶ್ರೀನಿವಾಸಪುರ ತಾಲ್ಲೂಕು.
14. ಗೋವಿಂದಪ್ಪ ಬಿನ್ ಚಿಕ್ಕಮುನಿಸ್ವಾಮಪ್ಪ,
    ನಂ.1332, ಬಸವೇಶ್ವರ ನಗರ
    ಪೋಲೀಸ್ ಠಾಣೆ, ಬೆಂಗಳೂರು.

**ಎದುರುದಾರರು**

1. ಗುರಪ್ಪ
   ಬಿನ್ ಮುನಿವೆಂಕಟಪ್ಪ,
   ಅರಮಾಕಲಹಳ್ಳಿ ಗ್ರಾಮ,
   ಕಸಬಾ ಹೋಬಳಿ,
   ಶ್ರೀನಿವಾಸಪುರ ತಾಲ್ಲೂಕು.
2. *ಗೋಪಾಲಪ್ಪ ಬಿನ್ ಸದವೆ ಮುನಿಸ್ವಾಮಿ (ಫವತಿ) ಇವರ ವಾರಸುದಾರರು*
   2.ಅ) ವೆಂಕಟಮ್ಮ
   ಕೋಂ ಲೇಃ ಗೋಪಾಲಪ್ಪ.
   2.ಆ) ಪಾಪಮ್ಮ ಬಿನ್ ಗೋಪಾಲಪ್ಪ,
   ಕೋಂ ವೆಂಕಟಸ್ವಾಮಿ.
   2.ಇ) ಜಯಪದ್ಮ ಕೋಂ ಶ್ರೀನಿವಾಸ್
   ಬಿನ್ ಗೋಪಾಲಪ್ಪ.
   -ಎಲ್ಲರೂ ವಾಸ
   ಶೆಟ್ಟಿಹಳ್ಳಿ ಗ್ರಾಮ,
   ವೈ.ಹೊಸಕೋಟೆ ಅಂಚೆ,
   ಕಸಬಾ ಹೋಬಳಿ,
   ಶ್ರೀನಿವಾಸಪುರ ತಾಲ್ಲೂಕು.

ವಿಷಯ: ಶ್ರೀನಿವಾಸಪುರ ತಾಲ್ಲೂಕು, ಕಸಬಾ ಹೋಬಳಿ ಅರಮಾಕಲಹಳ್ಳಿ ಗ್ರಾಮದಕೆಲವು ಜಮೀನುಗಳನ್ನು ಸಿವಿಲ್ ನ್ಯಾಯಾಲಯದ ಆದೇಶದಂತೆ ವಾದಿ ಮತ್ತು ಪ್ರತಿವಾದಿಗಳಿಗೆ ವಿಭಾಗ ಮಾಡುವ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯ ಡಬ್ಲ್ಯೂಪಿ.36970/1992 ದಿನಾಂಕ:08-06-1998 ರ ಆದೇಶದಂತೆ ಮರು ವಿಚಾರಣೆ ಮಾಡುವ ಬಗ್ಗೆ.

*****

ಪ್ರಸ್ತಾವನೆ.

ಈ ಮೇಲ್ಮನವಿಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ಕ್ರಮಾಂಕ: ಡಬ್ಲ್ಯೂಪಿ 36970/1992 ದಿನಾಂಕ:08-06-1998 ರಂತೆ ಮರುವಿಚಾರಣೆಗಾಗಿ ದಾಖಲಿಸಿಕೊಂಡಿದೆ.

ಪ್ರಕರಣದ ಸಂಕ್ಷಿಪ್ತ ವಿವರ.

ಶ್ರೀನಿವಾಸಪುರ ತಾಲ್ಲೂಕು, ಕಸಬಾ ಹೋಬಳಿ, ಅರಮಾಕಲಹಳ್ಳಿ ಮತ್ತು ಇತರೆ ಗ್ರಾಮಗಳ ಸ.ನಂ.21/3, 31 ಹಾಗೂ ಇತರೆ ಸ.ನಂ.ಗಳಿಗೆ ಸಂಬಂಧಿಸಿದಂತೆ, ಮಾನ್ಯ ಮುನ್ಸಿಫ್ ನ್ಯಾಯಾಲಯ, ಕೋಲಾರ ರವರ ಪ್ರಕರಣ ಸಂಖ್ಯೆ:ಓ.ಎಸ್.53/72 ದಿನಾಂಕ:22/11/1973 ರಲ್ಲಿ ಸಿ.ಪಿ.ಸಿ. ಕಲಂ 54 ರಂತೆ ವಿಭಾಗ ಮಾಡಲು ಆದೇಶಿಸಿರುವಂತೆ ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರದಲ್ಲಿ ಪ್ರಕರಣ ಸಂಖ್ಯೆ: ಎಂ.ಎಸ್.ಸಿ/ಸಿ.ಎಲ್.ಡಬ್ಲ್ಯೂ.24/75-76 ರಂತೆ ದಾಖಲಿಸಿಕೊಂಡು ದಿನಾಂಕ: 03/06/1983 ರಂದು ವಿಶೇಷ ಜಿಲ್ಲಾಧಿಕಾರಿಗಳು ಆರಮಾಕನಹಳ್ಳಿ ಗ್ರಾಮದ ಸ.ನಂ.21/3 ರಲ್ಲಿ 0-18 ಗುಂಟೆ, ಸ.ನಂ.31 ರಲ್ಲಿ 4-00 ಎಕರೆ ಹಾಗೂ ಶೆಟ್ಟಿಹಳ್ಳಿ ಗ್ರಾಮದ ಸ.ನಂ.85/2 ರಲ್ಲಿ 0-24 ಗುಂಟೆ ಜಮೀನನ್ನು ಡಿಕ್ರಿದಾರರಿಗೆ ಕೊಡಲು ಎದುರುದಾರರಿಗೆ ಸೂಚಿಸಿ ಆದೇಶಿಸಿರುತ್ತಾರೆ. ಈ ಆದೇಶದ ವಿರುದ್ದ ಗುರಪ್ಪ ಹಾಗೂ ಗೋಪಾಲಪ್ಪ ಎಂಬುವರು ಕರ್ನಾಟಕ ಮೇಲ್ಮನವಿ ಅಪೀಲು ಪ್ರಾಧಿಕಾರ, ರವರಲ್ಲಿ ಮೇಲ್ಮನವಿ ಸಲ್ಲಿಸಲಾಗಿ, ಮಾನ್ಯ ಪ್ರಾಧಿಕಾರವು ಮೇಲ್ಮನವಿ ವಜಾಕರಿಸಿರುತ್ತೆ. ಈ ಆದೇಶದಿಂದ ಬಾದಿತರಾದ ಗುರಪ್ಪ ಹಾಗೂ ಗೋಪಾಲಪ್ಪ ರವರು ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿ, ಮಾನ್ಯ ನ್ಯಾಯಾಲಯವು ಪ್ರಕರಣ ಸಂಖ್ಯೆ: ಡಬ್ಲ್ಯೂ.ಪಿ.36970/1992 ರಂತೆ ದಿನಾಂಕ:8/6/1998 ರಂದು ಪ್ರಶ್ನಿತ ವಿಶೇಷ ಜಿಲ್ಲಾಧಿಕಾರಿಗಳ ಹಾಗೂ ನ್ಯಾಯಾಧೀಕರಣದ ಆದೇಶಗಳನ್ನು ರದ್ದುಪಡಿಸಿ, ಮರು ವಿಚಾರಣೆ ಮಾಡಲು ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ರವರಿಗೆ ನಿರ್ದೇಶಿಸಿ ಆದೇಶಿಸಿರುತ್ತಾರೆ. ಸದರಿ ಆದೇಶದಂತೆ ಪ್ರಕರಣವನ್ನು ಮರುವಿಚಾರಣೆಗಾಗಿ ದಾಖಲಿಸಿಕೊಂಡು ಉಭಯತ್ರರಿಗೂ ವಿಚಾರಣೆಗೆ ಹಾಜರಾಗಲು ತಿಳಿಸಿ ನೋಟೀಸು ನೀಡಲಾಯ್ತು.

ದಿನಾಂಕ:05/07/2002 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ 10ನೇ ವಾದಿಯನ್ನು ಹೊರತುಪಡಿಸಿ ಉಭಯತ್ರರ ಪರವಾಗಿ ವಕೀಲರು ವಕಾಲತ್ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯ್ತು. ದಿನಾಂಕ:24/02/2010 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡು ಉಭಯತ್ರರ ಅಹವಾಲನ್ನು ಪರಿಶೀಲಿಸಲಾಯ್ತು. ಗೋವಿಂದಶೆಟ್ಟಿ ಬಿನ್ ಮುನಿಶಾಮಿ ರವರು ಸಿ.ಪಿ.ಸಿ ಆದೇಶ 22 ನಿಯಮ 3 ರೊಂದಿಗೆ ಓದಲಾದ ಕಲಂ 5 ರಂತೆ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿ 10ನೇ ವಾದಿ ಲಕ್ಷ್ಮಮ್ಮ ಕೋಂ ವೆಂಕಟೇಶಪ್ಪ ರವರ ಫವತಿ ವಾರಸುದಾರರನ್ನಾಗಿ ಪ್ರಕರಣದಲ್ಲಿ ಸೇರಿಸಿಕೊಳ್ಳಲು ಆದೇಶಿಸಲಾಯ್ತು. ಉಭಯತ್ರರಿಗೆ ಸಾಕಷ್ಟು ಕಾಲಾವಕಾಶ ನೀಡಿ ವಿಚಾರಣೆ ಮಾಡಿದೆ. ದಿನಾಂಕ:17/08/2016 ರಂದು ಉಭಯತ್ರರರ ವಕೀಲರ ಹಾಜರಾಗಿ, ಇವರ ಕೋರಿಕೆಯ ಮೇರೆಗೆ ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಯ್ತು.

ಪ್ರಕರಣದಲ್ಲಿ ಸಾಕಷ್ಟು ಕಾಲಾವಕಾಶ ನೀಡಿದರೂ ಸಹಾ ಉಭಯತ್ರರು ತಮ್ಮ ಲಿಖಿತ ವಾದವನ್ನಾಗಲೀ, ಆಕ್ಷೇಪಣೆಯನ್ನಾಗಲೀ ಸಲ್ಲಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕಡತದಲ್ಲಿ ಲಭ್ಯವಿರುವ ದಾಖಲೆಗಳಂತೆ ಪ್ರಕರಣವನ್ನು ಇತ್ಯರ್ಥಪಡಿಸಲು ನಿರ್ಧರಿಸಲಾಯ್ತು.

ಶ್ರೀನಿವಾಸಪುರ ತಾಲ್ಲೂಕು, ಕಸಬಾ ಹೋಬಳಿ, ಅರಮಾಕಲಹಳ್ಳಿ, ಸಿದ್ದನಹಳ್ಳಿ, ವರಟನಹಳ್ಳಿ, ಶೆಟ್ಟಿಹಳ್ಳಿ, ಹೊಸಕೋಟೆ, ಹೊಸೂರು ಮತ್ತು ಅಂಚಿಗಾನಹಳ್ಳಿ ಗ್ರಾಮದ ಷೆಡ್ಯೂಲ್‌ನಲ್ಲಿ ಕಂಡ ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ, ಮಾನ್ಯ ಮುನ್ಸಿಫ್ ನ್ಯಾಯಾಲಯ, ಕೋಲಾರ ರವರಲ್ಲಿ ಲಕ್ಷ್ಮಮ್ಮ ಕೋಂ ವೆಂಕಟೇಶಪ್ಪ ರವರು ಮುನೆಪ್ಪ ಬಿನ್ ಲೇಟ್ ರಾಮಣ್ಣ ಹಾಗೂ ಇತರರ ವಿರುದ್ದ ಭಾಗ ಕೋರಿ ದಾವೆ ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಸಂಖ್ಯೆ:ಓ.ಎಸ್.53/72 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ದಿನಾಂಕ:22/11/1973 ರಂದು 'ಎ' ಷೆಡ್ಯೂಲ್ ಪೈಕಿ $^{1}/_{10}$ ಹಿಸ್ಸೆ 'ಬಿ' ಷೆಡ್ಯೂಲ್ ನಲ್ಲಿ $^{1}/_{20}$ ಹಿಸ್ಸೆ ಜಮೀನಿಗೆ ವಾದಿ ಲಕ್ಷ್ಮಮ್ಮ ಕೋಂ ವೆಂಕಟೇಶಪ್ಪ ರವರು ಹಕ್ಕುದಾರರೆಂದು ಘೋಷಿಸಿ ಜಿಲ್ಲಾಧಿಕಾರಿಗಳು, ಕೋಲಾರ ರವರಿಗೆ ಸಿ.ಪಿ.ಸಿ ಕಲಂ 54 ರಂತೆ ಕ್ರಮ ಜರುಗಿಸಲು ಆದೇಶಿಸಿರುತ್ತಾರೆ.

ಷಡ್ಯೂಲ್ ವಿವರ : ಸಿದ್ದನಹಳ್ಳಿ ಗ್ರಾಮದ ಸ.ನಂ.27 ರಲ್ಲಿ 4–10 ಎಕರೆ, ಸ.ನಂ 28 ರಲ್ಲಿ 6–30 ಎಕರೆ, ವರಟನಹಳ್ಳಿ ಗ್ರಾಮದ 90/3 ರಲ್ಲಿ 2–27 ಎಕರೆ, ಸ.ನಂ.87/1 ರಲ್ಲಿ 0–23 ಗುಂಟೆ, ಸ.ನಂ.87/6 ರಲ್ಲಿ 0–29 ಗುಂಟೆ, ಸ.ನಂ.87/9 ರಲ್ಲಿ 1–00 ಎಕರೆ, ಸ.ನಂ 87/13 ರಲ್ಲಿ 0–07 ಗುಂಟೆ, ಸ.ನಂ. 99/1 ರಲ್ಲಿ 7–08 ಎಕರೆ, ಸ.ನಂ.85/1 ರಲ್ಲಿ 0–21 ಗುಂಟೆ, ಶೆಟ್ಟಿಹಳ್ಳಿ ಗ್ರಾಮದ ಸ.ನಂ. ಸ.ನಂ.89 ರಲ್ಲಿ 1–24 ಎಕರೆ, ಸ.ನಂ. 75/1 ರಲ್ಲಿ 2–15 ಎಕರೆ, ಹೊಸಕೋಟೆ ಗ್ರಾಮದ ಸ.ನಂ.73/1 ರಲ್ಲಿ 0–21 ಗುಂಟೆ, ಸ.ನಂ.71/1 ರಲ್ಲಿ 1–12 ಎಕರೆ, ಹೊಸೂರು ಗ್ರಾಮದ ಸ.ನಂ. 70 ರಲ್ಲಿ 0–08 ಗುಂಟೆ, ಆರಮಾಕಲಹಳ್ಳಿ ಗ್ರಾಮದ ಸ.ನಂ.3 ರಲ್ಲಿ 3–08 ಎಕರೆ, ಸ.ನಂ.15/1 ರಲ್ಲಿ 0–05.8 ಗುಂಟೆ, ಸ.ನಂ.21/3 ರಲ್ಲಿ 0–18 ಗುಂಟೆ, ಸ.ನಂ.47 ರಲ್ಲಿ 3–38 ಎಕರೆ, ಸ.ನಂ.31 ರಲ್ಲಿ 4–00 ಎಕರೆ, ಸ.ನಂ. 44 ರಲ್ಲಿ 2–18 ಎಕರೆ, ಸ.ನಂ.43 ರಲ್ಲಿ 3–11 ಎಕರೆ, ಸ.ನಂ.69/6 ರಲ್ಲಿ 1–17 ಎಕರೆ, ಸ.ನಂ.40 ರಲ್ಲಿ 1–09 ಎಕರೆ, ವರಟನಹಳ್ಳಿ ಗ್ರಾಮದ ಸ.ನಂ.85/1 ರಲ್ಲಿ 1–20 ಎಕರೆ, ಶೆಟ್ಟಿಹಳ್ಳಿ ಗ್ರಾಮದ ಸ.ನಂ.85/2 ರಲ್ಲಿ 0–24 ಗುಂಟೆ, ಸ.ನಂ.75/3 ರಲ್ಲಿ 1–00 ಎಕರೆ ಮತ್ತು ಅಂಚಿಗಾನಹಳ್ಳಿ ಗ್ರಾಮದ ಸ.ನಂ.49 ರಲ್ಲಿ 3–13 ಎಕರೆ.

## ಆದೇಶ

ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯ, ಕೋಲಾರ ರವರ ಆದೇಶ ಸಂಖ್ಯೆ:ಓ.ಎಸ್.53/72 ದಿನಾಂಕ:22/11/1973 ರಂತೆ ಮಾಡಿರುವ ಪ್ರಿಲಿಮಿನರಿ ಡಿಕ್ರಿ ಆದೇಶದಂತೆ ಅರ್ಜಿದಾರರಾದ ಲಕ್ಷ್ಮಮ್ಮ ಕೋಂ ವೆಂಕಟೇಶಪ್ಪ ರವರ ಹಿಸ್ಸೆಗೆ 'ಎ' ಷೆಡ್ಯೂಲ್‌ನಲ್ಲಿ $^{1}/_{10}$ ಹಿಸ್ಸೆ ಹಾಗೂ 'ಬಿ' ಷೆಡ್ಯೂಲ್‌ನಲ್ಲಿ $^{1}/_{20}$ ಹಿಸ್ಸೆಯಂತೆ ಅಳತೆ ಮಾಡಿ ನಕಾಶೆ ತಯಾರಿಸಿ ಜಮೀನಿನ ಮೌಲ್ಯ ನಿರ್ಣಯದೊಂದಿಗೆ **(Valuation)** ವರದಿ ಸಲ್ಲಿಸಲು ತಹಶೀಲ್ದಾರ್, ಶ್ರೀನಿವಾಸಪುರ ತಾಲ್ಲೂಕು ರವರಿಗೆ ನಿರ್ದೇಶಿಸಿ ಆದೇಶಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ: 19/10/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

K. V. [signature]
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

ಜಿಲ್ಲಾಧಿಕಾರಿಗಳ ಪರವಾಗಿ
ಕೋಲಾರ ಜಿಲ್ಲೆ.
24/10/16